ಮೊನ್ನೆ ಹೆಣ್ಣುಮಗುನೂ ಆಯ್ತಂತೆ.'

'.....'

'ಅಕ್ಕ, ಬದುಕೋಕ್ಕೆ ದುಡ್ಡು ಬೇಕು, ಆದರೆ ದುಡ್ಡೇ ಬದುಕು ಆಗಬಾರದು ಅಲ್ವ? ಆ ಸೊಸೆ ಲಕ್ಷಗಟ್ಟಲೆ ಸಂಪಾದನೆ ಮಾಡುತ್ತೆ; ಯಾವ ಪ್ರಯೋಜನಕ್ಕೆ ಅಲ್ವಕ್ಕ?'

★★★

ಚಂದ್ರಿ ಹೋದಮೇಲೂ ಆ ಕಾಣೆಯಾದವನ ಬಗ್ಗೆ ನನ್ನ ಯೋಚನೆ ಅಲೆಯುತ್ತಿತ್ತು. ಯಾಕೋ ಇಲ್ಲಿ ಯಾರ ನಡೆ ಸರಿ ಯಾರದು ತಪ್ಪು ಎಂಬುದು ಅವರವರ ಭಾವಕ್ಕೆ, ತರ್ಕಕ್ಕೆ ಸಲ್ಲುವಂತಹುದು. ಚಪ್ಪಲಿಯ ಮೊಳೆಯ ನೋವು ಮೆಟ್ಟಿದವನಿಗಷ್ಟೇ ಗೊತ್ತು.

★★★

ರಿಷಿ, ನಾನಿಲ್ಲದೇ ಪರದಾಡುತ್ತಿರಬಹುದೆ? ಊಟ ತಿಂಡಿ ಹೊರಗೆ ದೊರೆತ ಮಾತ್ರಕ್ಕೆ ಮಡದಿ ಮಕ್ಕಳ ಮಮತೆ ದೊರೆತೀತೇ? ಎಂತೆಂತಹ ಕಿರಾತಕ ಗಂಡಂದಿರ ಬಗ್ಗೆ ಕೇಳಿಲ್ಲ? ನನ್ನ ಸಹೋದ್ಯೋಗಿಗಳ ಬವಣೆಯೇ ಸಾಕು. 'ನನ್ನ ಎಟಿಎಂ ಕಾರ್ಡು ಅವರ ಬಳಿಯಲ್ಲಿ, ಮಕ್ಕಳಿಗೋಸ್ಕರ ಬಿಡದೇ ಇದ್ದೀನಿ ಅಷ್ಟೆ' ಮಧ್ಯ ವಯಸ್ಸಿನ ಅಹಲ್ಯಾ ಗದ್ಗದಿತರಾದರೆ, 'ಗಾಣದೆತ್ತಿನಂತೆ ಹೊರಗೂ ದುಡಿ, ಮನೇಲೂ ದುಡಿ, ನನಗೇಂತ ಸ್ಪೇಸ್ ಬೇಡವಾ?' ಅಮ್ಮನ ಮನೆಯಲ್ಲಿ ವಾರದಿಂದ ಜಾಂಡಾ ಹಾಕಿರುವ ಸ್ಮಿತಾಳ ವ್ಯಂಗ್ಯ. 'ವೀಕ್ ಎಂಡ್ ಪಾರ್ಟಿ ಅಂತ ಹೊರಗೆ ಹೋಗಿದ್ದೆ ಬಾಯ್ ಫ್ರೆಂಡ್ ಜೊತೆ. ಇವನಿಗೆ ಕೇಳೋ ತಾಕತ್ತಿಲ್ಲ. ಯಾಕೆಂದ್ರೆ, ಇವನ ಗೆಳತಿಯ ಬಗ್ಗೆ ನನಗೂ ಗೊತ್ತಿದೆ' ಮದುವೆಯಾಗಿ ವರ್ಷ ಕಳೆದಿಲ್ಲ ಸ್ನೇಹಾಳ ಮಾತು.

'ನನ್ನ ಕರ್ಮಕ್ಕೆ ದುಡಿಮೆ ಅನಿವಾರ್ಯ. ಮದುವೆಯಾಗದ ಇಬ್ಬರು ತಂಗಿಯರ ಹೊರೆ ಜೊತೆಗೆ ನಿರುದ್ಯೋಗಿ ತಮ್ಮ. ಈ ಭಾಗ್ಯಕ್ಕೆ ಮದುವೆ ಬೇಕಿತ್ತೇ ಎನ್ನಿಸುತ್ತೆ' ಚಾರುಮತಿಯನ್ನು ನೋಡುವಾಗ ಪಾಪವೆನ್ನಿಸದಿರದು. 'ಎಲ್ಲ ದರಿದ್ರ ಮಧ್ಯಮವರ್ಗದವರಿಗೇ. ಮೇಲೆ ಹೋಗೋಕ್ಕಾಗೋಲ್ಲ, ಕೆಳಗೆ ಇಳಿಯೋಕ್ಕಾಗಲ್ಲ. ಭಾವನೆಗಳ ತ್ರಿಶಂಕುವಿನಲ್ಲೇ ಹೆಣಗಾಡಬೇಕು; ಯಾವ ಊರಿಗೆ ಹೋದರೂ ನುಣುಚಿಕೊಳ್ಳಲಾದ ಅನಿವಾರ್ಯ, ಮನಿ ಮ್ಯಾಟರ್ಸ್' ಸೀನಿಯರ್ ಮೋಸ್ಟ್ ಸುಕೇಶಿನಿ ತಲೆ ಚಚ್ಚಿಕೊಂಡದ್ದು ನೆನಪಾಯಿತು. 'ನೀವು ಲಕ್ಕಿ ಕಣ್ರೀ ಅಮ್ಮಿಣಿ, ನಿಮಗೆ ಸಾಂಸಾರಿಕ ಬಾಧೆಗಳು ಇಲ್ಲವೆಂದೇ ಹೇಳಬೇಕು; ಅಂಡರ್‌ಸ್ಟ್ಯಾಂಡಿಂಗ್ ಫ್ಯಾಮಿಲಿ ನಿಮ್ಮದು, ವರ್ಗಾವಣೆ ಆದರೂ ನಡೆಯುತ್ತೆ' ಎಂದು ಮುಕ್ತಾಯ ಹಾಡಿದ್ದರು.

ನಾನು ಮೌನವನ್ನಪ್ಪಿದ್ದೆ. ಅವರ ಮಾತುಗಳಲ್ಲಿ ನಿಜ ಇತ್ತಲ್ಲ?

ನಾನು ದುಡಿಯುವ ಅನಿವಾರ್ಯತೆ ಇಲ್ಲ. ಇನ್ನೆರಡು ವರ್ಷವಾದರೆ ಮಗ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವ ಸ್ಥಿತಿ ತಲುಪಿರುತ್ತಾನೆ. ಈಗ ಕೆಲಸ ಬಿಟ್ಟರೂ ಖಾಲಿ ಕೈಯಲ್ಲಿ ಬರುವುದಿಲ್ಲ. ಸಾಕಷ್ಟು ಸಿಗುತ್ತದೆ. ಅಲ್ಲಿ ರಿಷಿಯ ಜೊತೆ ಇರುವುದು ಬಿಟ್ಟು ಹೀಗೊಂದು ಜೀವನ ಬೇಕೆ? ಕೆಲಸದ ಯಾಂತ್ರಿಕತೆ ನನಗೂ ಸಾಕಾಗಿದೆ. ಮೊದಲಿನಂತೆ ಸ್ಟ್ರೆಸ್ ಭರಿಸಲಾಗದು. 'ನಿನ್ನಷ್ಟು ಅನುಕೂಲವಿದ್ದಿದ್ದರೆ ಯಾಕೆ ಬೇಕು ಈ ಕೆಲಸ? ನಿನ್ನ ಜಾಗದಲ್ಲಿದ್ದಿದ್ದರೆ ಯಾವತ್ತೋ ರಿಸೈನ್ ಮಾಡಿ ದೆಹಲಿಗೆ ಹೊರಟುಬಿಡುತ್ತಿದ್ದೆ, ಆದರೆ ಅದೃಷ್ಟವಿಲ್ಲ' ಕ್ಲೋಸ್ ಫ್ರೆಂಡ್ ವೃಂದಾ ಕಾಫಿ ಹೀರುತ್ತಾ ಪಿಸುಗುಟ್ಟಿದ್ದಳು.

ಆ ಕ್ಷಣ ರಿಷಿಗೆ ಮಾತನಾಡಬೇಕೆನ್ನಿಸಿತು. 'ಫ್ರೀ ಆದಾಗ ಮಾತನಾಡುವುದು' ಎಂದು ಸಂದೇಶ ಕಳುಹಿಸಿದೆ.

★★★